**ಕರ್ನಾಟಕ ಮುಕ್ತ ಶಾಲೆಗಳ ಪರೀಕ್ಷೆ, ಜೂನ್, 2015**

**Karnataka Open School Examination, June, 2015**

# ಅರ್ಥಶಾಸ್ತ್ರ

# ECONOMICS

**(ಹೊಸ ಪಠ್ಯಕ್ರಮ)**

**( New Syllabus )**

ದಿನಾಂಕ : 24. 06. 2015 ]

Date : 24. 06. 2015 ]

ಸಮಯ : ಮಧ್ಯಾಹ್ನ 2.00 ರಿಂದ 5.00 ರವರೆಗೆ ] [ ಪರಮಾವಧಿ ಅಂಕಗಳು : 100

Time : 2.00 P.M. to 5.00 P.M. ] [ Maximum Marks : 100

***ಸೂಚನೆಗಳು :***
i) ಎಲ್ಲಾ ಪ್ರಶ್ನೆಗಳೂ ಕಡ್ಡಾಯ.
ii) ಪ್ರಶ್ನೆ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ತಪ್ಪದೇ ನಮೂದಿಸಿ.
iii) ಉತ್ತರಗಳು ನೇರವಾಗಿರಲಿ ಹಾಗೂ ಸಂಕ್ಷಿಪ್ತವಾಗಿರಲಿ.

I. ಈ ಕೆಳಕಂಡ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗವನ್ನು ಸೂಕ್ತ ಉತ್ತರದಿಂದ ತುಂಬಿ : 5 × 1 = 5

1) ಕೈಗಾರಿಕಾ ಕ್ರಾಂತಿ ಮೊಟ್ಟ ಮೊದಲು ಸಂಭವಿಸಿದ್ದು ............................ ರಾಷ್ಟ್ರದಲ್ಲಿ.

2) ಗೇಣಿ ಮತ್ತು ಬಡ್ಡಿಗಳು ............................ರ ಆದಾಯವಾಗಿವೆ.

3) ನ್ಯಾಯಬೆಲೆ ಅಂಗಡಿಗಳು ............................ ಮಾರುಕಟ್ಟೆಗೆ ಉದಾಹರಣೆ.

4) ಭಾರತೀಯರ ಜೀವಿತಾವಧಿ ಸರಾಸರಿ ............................ ವರ್ಷಗಳು.

5) ಐದು ವರ್ಷಗಳಿಗಾಗಿ ರೂಪಿಸಿರುವ ಯೋಜನೆಗಳನ್ನು ............................ ಯೋಜನೆಗಳೆನ್ನುವರು.

II. ಈ ಕೆಳಗಿನ ವಾಕ್ಯಗಳು ಸರಿಯೋ ಅಥವಾ ತಪ್ಪೋ ತಿಳಿಸಿ : 5 × 1 = 5

6) ಒಂದು ವೇಳೆ ಉತ್ಪನ್ನಕ್ಕೆ ಬೇಡಿಕೆ ಅಧಿಕವಾಗಿದ್ದರೆ ಉತ್ಪಾದನಾ ಪ್ರಮಾಣ ದೊಡ್ಡದಾಗುತ್ತದೆ.

7) ಮನೋಭಾವ ಎನ್ನುವುದು ವ್ಯಕ್ತಿ ಹುಟ್ಟಿನಿಂದ ನಿರ್ಧರಿಸಲ್ಪಟ್ಟಿರುತ್ತದೆ.

8) ಹೋಟೆಲ್ ಮತ್ತು ಉಪಹಾರ ಮಂದಿರಗಳ ಖರೀದಿಸುವಿಕೆ ಉದ್ದೇಶವು ಅನುಭೋಗವಾಗಿದೆ.

9) ಅಂಗಡಿಯವನ ಗಳಿಕೆ ಅವನ ಲಾಭ ಮಾತ್ರ ಆಗಿರುತ್ತದೆ.

10) ಭಾರತವು ಮುಂದುವರೆಯುತ್ತಿರುವ ದೇಶ.

III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ***ಒಂದು–ಎರಡು*** ವಾಕ್ಯಗಳಲ್ಲಿ ಉತ್ತರಿಸಿ : $10 \times 1 = 10$

11) ಮಾನವನ ಮೂಲಭೂತ ಅಗತ್ಯತೆಗಳಾವುವು ?

12) ಸರಕುಗಳು ಎಂದರೇನು ?

13) ಉದ್ಯಮೆಗಾರಿಕೆ ಎಂದರೇನು ?

14) ಸಣ್ಣ ಪ್ರಮಾಣದ ಘಟಕಗಳೆಂದರೆ ಎಂತಹುವುದು ?

15) ವೈಜ್ಞಾನಿಕ ಬೇಸಾಯವೆಂದರೇನು ?

16) ಪ್ರೇರಣೆಯು ಕ್ರಿಯಾತ್ಮಕವಾಗಲು ಪ್ರೇರೇಪಿಸುತ್ತದೆ ಏಕೆ ?

17) ಏಕಸ್ವಾಮ್ಯ ಮಾರುಕಟ್ಟೆ ಎಂದರೇನು ?

18) 'ಜನಸಾಂದ್ರತೆ'ಯನ್ನು ಹೇಗೆ ಲೆಕ್ಕ ಹಾಕುವಿರಿ ?

19) ನಿವ್ವಳ ವಲಸೆಯ ಅರ್ಥವೇನು ?

20) ನಿರುದ್ಯೋಗಿ ಯಾರು ?

IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ***ಎರಡು–ಮೂರು*** ವಾಕ್ಯಗಳಲ್ಲಿ ಉತ್ತರಿಸಿ : $10 \times 2 = 20$

21) ಹೂಡಿಕೆಯನ್ನು ವ್ಯಾಖ್ಯಾನಿಸಿ, ಇದು ಏಕೆ ಅವಶ್ಯಕ ?

22) ಉತ್ಪಾದನಾ ಘಟಕದ ಮೂಲಾಂಶಗಳಾವುವು ?

23) ಉತ್ಪಾದನೆಯನ್ನು ಹೆಚ್ಚಿಸಿರುವುದರ ಅಗತ್ಯತೆ ಏಕಿದೆ ?

24) ಆಧುನಿಕ ತಂತ್ರಗಳನ್ನು ಅಳವಡಿಸುವಾಗ ಉದ್ಭವಿಸುವ ಮೂರು ಸಮಸ್ಯೆಗಳಾವುವು ?

25) ನಿಮ್ಮ ಸುತ್ತಮುತ್ತಲಿರುವ ಉತ್ಪಾದನಾ ಘಟಕಗಳನ್ನು ಪಟ್ಟಿಮಾಡಿ.

26) ಮಾರಾಟಗಾರರ ಪದದ ಅರ್ಥವನ್ನು ವಿವರಿಸಿ.

27) ಬೆಂಬಲ ಬೆಲೆ ಮತ್ತು ಇಬ್ಬಗೆಯ ಬೆಲೆಯನ್ನು ವ್ಯಾಖ್ಯಾನಿಸಿ.

28) ತಲಾ ಆದಾಯವನ್ನು ನಾವು ಹೇಗೆ ಕಂಡುಕೊಳ್ಳಬಹುದು ?

29) ವಿವಿಧ ದೇಶಗಳ ಉತ್ಪಾದನಾ ಮಾದರಿ ಏಕೆ ಭಿನ್ನವಾಗಿದೆ ?

30) ನೈಸರ್ಗಿಕ ಸಂಪನ್ಮೂಲಗಳು ಎಂದರೇನು ? ವಿಧಗಳನ್ನು ಹೆಸರಿಸಿ.

V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ***ಐದು*** ವಾಕ್ಯಗಳಲ್ಲಿ ಉತ್ತರಿಸಿ : 10 × 3 = 30

31) ಬಯಕೆಗಳ ಪ್ರಕಾರಗಳನ್ನು ವಿವರಿಸಿ.

32) ಉದ್ಯಮ ಸಾಹಸಿಯ ಮುಖ್ಯ ಕಾರ್ಯಗಳೇನು ?

33) ಭವಿಷ್ಯದಲ್ಲಿ ಹೆಚ್ಚು ಉತ್ಪಾದನಾ ಸಾಮರ್ಥ್ಯ ಹೊಂದಲು ಕೈಗೊಳ್ಳುವ ಕ್ರಮಗಳಾವುವು ?

34) ಉತ್ಪಾದನೆಯಲ್ಲಿ ಪ್ರೇರಣೆಯ ಪಾತ್ರವೇನು ?

35) ಆದಾಯದ ಅಸಮಾನತೆ ಎಂದರೇನು ?

36) ಬಡವರಿಗೆ ಸಹಾಯ ಮಾಡಲು ನೀವು ಏನನ್ನು ಸೂಚಿಸುವಿರಿ ?

37) ಮಾರಾಟಗಾರರ ಪ್ರಕಾರಗಳನ್ನು ತಿಳಿಸಿ.

38) ಯಾವ ಆಧಾರದ ಮೇಲೆ ನೀವು ಬಡ ದೇಶಗಳನ್ನು ಶ್ರೀಮಂತ ದೇಶಗಳಿಂದ ಪ್ರತ್ಯೇಕಿಸಬಹುದು ?

39) ಜನಸಂಖ್ಯೆ ಹೆಚ್ಚಳದಿಂದ ಸಂಪನ್ಮೂಲಗಳು ಬರಿದಾಗುತಿದೆ ಹೇಗೆ ?

40) ಶಬ್ದ ಮಾಲಿನ್ಯ ಎಂದರೇನು ? ಅದು ಹೇಗೆ ಹಾನಿಕಾರಕ ?

VI. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ***ಎಂಟರಿಂದ ಹತ್ತು*** ವಾಕ್ಯಗಳಲ್ಲಿ ಉತ್ತರಿಸಿ : 5 × 4 = 20

41) ಬಂಡವಾಳದ ಲಕ್ಷಣಗಳಾವುವು ?

42) ಕೃಷಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಯಾವ ರೀತಿ ಅಳವಡಿಸಬಹುದು ?

43) ಪಡಿತರ ವ್ಯವಸ್ಥೆಯ ಮುಖ್ಯ ಅನುಕೂಲಗಳಾವುವು ?

44) ಮುಕ್ತ ಮಾರುಕಟ್ಟೆ ಆರ್ಥಿಕತೆಯು ಮುಖ್ಯ ಲಕ್ಷಣಗಳಾವುವು ?

45) ಜನಸಂಖ್ಯಾ ತೀವ್ರ ಬೆಳವಣಿಗೆಯಿಂದ ಉಂಟಾಗುವ ಸಮಸ್ಯೆಗಳೇನು ?

VII. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ***ಹತ್ತರಿಂದ ಹನ್ನೆರಡು*** ವಾಕ್ಯಗಳಲ್ಲಿ ಉತ್ತರಿಸಿ : $2 \times 5 = 10$

46) ಮನೋಭಾವ ಎಂದರೇನು ? ಮನೋಭಾವ ನಿರ್ಧರಿಸುವಲ್ಲಿ ಕುಟುಂಬ, ಶಿಕ್ಷಣ, ಸಮಾಜದ ಪಾತ್ರವೇನು ?

47) ಮಿಶ್ರ ಆರ್ಥಿಕತೆಯ ಅನುಕೂಲ ಹಾಗೂ ಅನಾನುಕೂಲಗಳನ್ನು ವಿವರಿಸಿ.